## ಎಂಎಸ್ ಆಫೀಸ್ ಸೃಷ್ಟಿಗೆ 'ಕಿಂಗ್‌ಸಾಫ್ಟ್'




ಬಹಳಷ್ಟು ಉಚಿತ ಮೊಬೈಲ್ ಆಫೀಸ್ ಅಪ್ಲಿಕೇಶನ್‌ಗಳಿಂದ ಎಂಎಸ್ ಆಫೀಸ್ ಫೈಲ್‌ಗಳನ್ನು ನೋಡಲು ಮಾತ್ರ ಸಾಧ್ಯ. ಆದರೆ ಕಿಂಗ್‌ಸಾಫ್ಟ್ ಆಫೀಸ್ ಅಪ್ಲಿಕೇಶನ್‌ನಿಂದ ಅವುಗಳನ್ನು ನೋಡಬಹುದಲ್ಲದೆ ಹೊಸದಾಗಿ ಸೃಷ್ಟಿಸಿ ಎಡಿಟ್ ಕೂಡಾ ಮಾಡಬಹುದು. ಅದೂ ಸಂಪೂರ್ಣ ಉಚಿತವಾಗಿ.

ಬಹುತೇಕ ಮೊಬೈಲ್ ಆಫೀಸ್ ಅಪ್ಲಿಕೇಶನ್‌ಗಳು 'ಎಂ.ಎಸ್. ಆಫೀಸ್ ಫೈಲ್ ಓದಬಹುದು; ಆದರೆ ಸೃಷ್ಟಿಸಲು/ ಎಡಿಟ್ ಮಾಡಲು ಸಾಧ್ಯವಿಲ್ಲ' ಎಂಬ ತಲೆಬರಹ ಹಾಕಿಬಿಟ್ಟಿರುತ್ತವೆ. ಆದರೆ ಆ್ಯಂಡ್ರಾಯ್ಡ್ ಫೋನ್ ಗೋಸ್ಕರ ಕಿಂಗ್‌ಸಾಫ್ಟ್ ತಂದಿರುವ ಅಪ್ಲಿಕೇಶನ್ ಅನ್ನು ಗೂಗ್ಲ್ ಪ್ಲೇನಿಂದ ಡೌನ್‌ಲೋಡ್ ಮಾಡಿಕೊಂಡರೆ ಇವೆಲ್ಲವೂ ಸಾಧ್ಯ. ಒಟ್ಟು ಡೌನ್‌ಲೋಡ್ 10 ಎಂ.ಬಿ. ಟೂಲ್‌ಬಾರ್ ಚಿಕ್ಕದಾಗಿದ್ದರೂ 'ಓಪನ್, ಕ್ರಿಯೇಟ್, ಶೇರ್, ರಿಮೂವ್' ಆಯ್ಕೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ.

ಫೈಲ್‌ಗಳನ್ನು .ಡಾಕ್, .ಡಾಕ್‌ಎಕ್ಸ್ ಮಾದರಿಯಲ್ಲಿ ಕಾಪಿಡಬಹುದು. ಒಟ್ಟು ಶಬ್ದಗಳ ಸಂಖ್ಯೆಯನ್ನು ನೋಡಬಹುದು. ಫೈಲ್‌ಗಳನ್ನು ಸಾಮಾನ್ಯ ಹಾಗೂ ವೆಬ್ ಲೇಔಟ್, ಎಕ್ರಿಪ್ಟ್ ಮಾದರಿಯಲ್ಲಿ ವೀಕ್ಷಿಸಿ ಲಿಪಿಯನ್ನು ಬದಲಿಸಬಹುದು. ಕಾಗುಣಿತ ಪರೀಕ್ಷಿಸಬಹುದು. ಕ್ಲೌಡ್ ಸ್ಟೋರೇಜ್ ಕೂಡಾ ಲಭ್ಯ. ಅಪ್ಲಿಕೇಶನ್‌ಗೆ ಡ್ರಾಪ್‌ಬಾಕ್ಸ್, ಗೂಗ್ಲ್ ಡ್ರೈವ್, ಬಾಕ್ಸ್.ನೆಟ್ ಬೆಂಬಲ ಕೂಡಾ ಇದೆ.

https://play.google.com/store/apps/details/id=cn.wps.moffice_eng&hl=en ಡೌನ್‌ಲೋಡ್ ಮಾಡಿ.

## ಸಾಮಾಜಿಕ ಜಾಲ ತಾಣ 'ಪಾತ್'




ಹೆಚ್ಚಿನ ಸಾಮಾಜಿಕ ಜಾಲ ತಾಣಗಳು ಎಣೆಯಿಲ್ಲದಷ್ಟು ಸ್ನೇಹಿತರು, ಹಿಂಬಾಲಕರನ್ನು ಹೊಂದಲು ಅನುವು ಮಾಡಿಕೊಡುತ್ತವೆ. ಕೆಲವೊಮ್ಮೆ ಇದು ನಿಮ್ಮ ಮೇಲೆ ಒತ್ತಡ ಹೇರಬಹುದು. ಆದರೆ 'ಪಾತ್' ನಿಮಗೆ ನಿಜವಾಗಲೂ ಬೇಕಾದವರ ಪಟ್ಟಿಯನ್ನು ಮಾತ್ರ ನೀಡುತ್ತದೆ. ಗರಿಷ್ಠವೆಂದರೆ 150 ಮಂದಿಯ ಜೊತೆ ಸಂಪರ್ಕ ಸಾಧಿಸಬಹುದು. ನಂತರ ನಿಮಗೆ ಆಹ್ವಾನವಾಗಲೀ, ಹಂಚಿಕೊಳ್ಳುವ ಇರಾದೆಯಾಗಲೀ ಬರುವುದೇ ಇಲ್ಲ.

ಈ ಸಾಮಾಜಿಕ ಜಾಲ ತಾಣ ಸಂಪೂರ್ಣ ಉಚಿತ. ಐಟ್ಯೂನ್ ಆ್ಯಪ್ ಸ್ಟೋರ್ ಅಥವಾ ಆ್ಯಂಡ್ರಾಯ್ಡ್ ಪ್ಲೇನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇದು ಅತ್ಯಂತ ಸರಳ ಹಾಗೂ ಸುಂದರ. ಬೇರೆ ಜಾಲ ತಾಣಗಳ ತರಹ ಗಜಿಬಿಜಿ ಇರುವುದಿಲ್ಲ. ಮೇಲ್ಗಡೆ ಹಿನ್ನೆಲೆ ಚಿತ್ರ ದೊಡ್ಡದಾಗಿ, ನಿಮ್ಮ ಭಾವಚಿತ್ರ ಸಣ್ಣ ವೃತ್ತದಲ್ಲಿ ಮೂಡಿಬರುತ್ತದೆ. ಕೆಳಗಡೆ ನೀವು ಹಿಂಬಾಲಿಸ ಬಯಸುವವರ ಚಟುವಟಿಕೆಗಳು ಕಾಣುತ್ತವೆ. ಹಿಂದೆ ಫೇಸ್‌ಬುಕ್ ಸರಳವಾಗಿದ್ದ ಕಾಲವನ್ನು ನಿಮಗೆ ನೆನಪಿಸುತ್ತದೆ.

ಈ ಅಪ್ಲಿಕೇಶನ್ ಅನ್ನು ಐಫೋನ್ 4ಎಸ್ ಮತ್ತು ಎಕ್ಸ್‌ಪೆರಿಯಾ ಎಸ್ ನಲ್ಲಿ ಆರಾಮವಾಗಿ ನೋಡಬಹುದು. ಎಡ ಕೊನೆಗೆ ಇರುವ ಪ್ಲಸ್ ಗುರುತು ನಿಮಗೆ ಬೇಕಾದ ಸಂದೇಶಗಳನ್ನು, ಮಾಹಿತಿಗಳನ್ನು ಹಂಚಿಕೊಳ್ಳಲು ಅನುವು ಮಾಡಿಕೊಡುತ್ತದೆ. ಉಳಿದ ಸಾಮಾಜಿಕ ಜಾಲ ತಾಣಗಳಾದ ಫೇಸ್‌ಬುಕ್, ಟ್ವಿಟ್ಟರ್, ಫೋರ್‌ಸ್ಕ್ವೇರ್ ಬೆಂಬಲ ಕೂಡಾ ಇದಕ್ಕಿದೆ.




## ರೆಬೆಲ್‌ಮೌಸ್

'ದಿನಪತ್ರಿಕೆಯಾಗಿ ಸಾಮಾಜಿಕ ಜಾಲ ತಾಣ' ಎಂಬ ತತ್ವ ಹೊಸದೇನಲ್ಲ. ಫ್ಲಿಪ್‌ಬೋರ್ಡ್ ಈಗಾಗಲೇ ಟ್ವಿಟ್ಟರ್ ಅನ್ನು ದಿನಪತ್ರಿಕೆಯ ರೀತಿಯಲ್ಲಿ ಬದಲಿಸುತ್ತದೆ. ಇದೇ ಮಾದರಿಯಲ್ಲಿ ಈಗ ರೆಬೆಲ್‌ಮೌಸ್ ಬಂದಿದೆ. http://www.rebelmouse.com ಗೆ ಹೋಗಿ ನೋಂದಣಿ ಮಾಡಿಸಿಕೊಳ್ಳಬೇಕು. ವಾರದ ನಂತರ ವೆಬ್‌ನಿಂದ ನಿಮಗೆ ಉತ್ತರ ಬರುತ್ತದೆ. ಟ್ವಿಟ್ಟರ್ ಮತ್ತು ಫೇಸ್‌ಬುಕ್ ಖಾತೆಗಳ ಸಂಪರ್ಕವನ್ನು ಇದಕ್ಕೆ ಕಲ್ಪಿಸಬೇಕು. ನಿಮಗೆ ವಾಪಸ್ ಮೇಲ್ ಬಂದ ನಂತರ ಅದರ ಮೇಲೆ ಕ್ಲಿಕ್ ಮಾಡಿದರೆ ರೆಬೆಲ್‌ಮೌಸ್‌ಗೆ ಸಂಪರ್ಕ ಏರ್ಪಡುತ್ತದೆ. ದಿನಪತ್ರಿಕೆಯಂತೆ ಮಾಸ್ಟ್‌ಹೆಡ್, ತಲೆಬರಹ, ವರದಿಯ ರೀತಿಯಲ್ಲಿ ಎಲ್ಲಾ ಚಟುವಟಿಕೆಗಳು ಮಾರ್ಪಡುತ್ತವೆ. ಚಿತ್ರಗಳೂ ಸುದ್ದಿಚಿತ್ರದಂತೆ ನೀಟಾಗಿ ಕೂರುತ್ತವೆ.

ನಿಮಗೆ ಬಂದ ಪೋಸ್ಟ್‌ಗಳನ್ನು ಎಲ್ಲಿ ಬೇಕೆಂದರೆ ಅಲ್ಲಿ ಎಳೆದು (ಡ್ರ್ಯಾಗ್ ಆ್ಯಂಡ್ ಡ್ರಾಪ್) ಕೂರಿಸಬಹುದು. ಅವುಗಳನ್ನು ಎಡಿಟ್ ಮಾಡಬಹುದು, ತಿದ್ದಿ ಬರೆಯಬಹುದು. ಲೇಔಟ್ ಕೂಡಾ ನಿಮಗೆ ಬೇಕಾದಂತೆ ಮಾಡಬಹುದು.

■ ಎಸ್.ತುಂಬೆ